# ಪಿರಮಿಡ್ ಕಾಲ್ ಸರ್ವೀಸಸ್ ಬೆಂಗಳೂರು

ಒಂದೇ ಒಂದು ಫೋನ್ ಕಾಲ್,
ನಿಮ್ಮ ಸಂಪೂರ್ಣ ಜೀವನವನ್ನು ಬದಲಾಯಿಸಬಹುದು...!



ಬ್ರಹ್ಮರ್ಷಿ ಪಿತಾಮಹ ಪತ್ರೀಜಿ

# ವಾರ್ತಾ ಪತ್ರ - ಜೂನ್ 2021



## ಮುಖ್ಯ ಮಾರ್ಗದರ್ಶಕರ ಸಂದೇಶ

ಆತ್ಮೀಯ ಧ್ಯಾನ ಬಂಧುಗಳೇ,

ನಾವು ಆತ್ಮ ಸ್ವರೂಪಿಗಳು. ದೇಹ, ಮನಸ್ಸು, ಬುದ್ಧಿ, ಆತ್ಮ ಮತ್ತು ಪ್ರಾಣಶಕ್ತಿಗಳಿಂದ ಕೂಡಿರುವಂತಹ ಜೀವಾತ್ಮಗಳು. ಈ ಮಾನವ ಜನ್ಮ ಏತಕ್ಕಾಗಿದೆ? ಯಾಕೆ ಬದುಕುತ್ತಿದ್ದೇವೆ? ಈ ಜೀವನದ, ಜನ್ಮದ ಮತ್ತು ಈ ಆತ್ಮದ ಉದ್ದೇಶ ಏನು? ಹೀಗೆ ಹಲವು ಮೂಲ ಪ್ರಶ್ನೆಗಳಿಗೆ ಉತ್ತರ ಹುಡುಕುತ್ತಾ ಅನೇಕ ಯೋಗಿಗಳು ಮಹಾ ಪುರುಷರು ಯುಗ ಯುಗಗಳಿಂದ ಸಾಧನೆ ಮಾಡಿ, ಪರಿಶೋಧನೆ ಮಾಡಿ, ಅರಿತಂತಹ ಸಮಾಧಾನವೇನೆಂದರೆ ನಾವು ಈ ಲೋಕಕ್ಕೆ ಬಂದಿರುವುದು "ಸುಖ, ಶಾಂತಿ, ಸಮೃದ್ಧಿ, ನೆಮ್ಮದಿ, ಆಯು, ಆರೋಗ್ಯ, ಆನಂದ, ಪರಮಾನಂದದಿಂದ ಜೀವಿಸಲು" ಎಂಬ ಸತ್ಯ, ಈ ಆನಂದ ನಮ್ಮೊಳಗೆ ಇದೆ, ಇದರ ಇನ್ನೊಂದು ಹೆಸರೆ ಪರಮಾತ್ಮ. ಅಂದರೆ "ಆನಂದವೇ ಬ್ರಹ್ಮ", "ಆನಂದವೇ ಶ್ರೇಷ್ಠ". ಈ ಆನಂದ ಸ್ಥಿತಿಯೇ ಜ್ಞಾನೋದಯದ **(Enlightenment)** ಸ್ಥಿತಿ. ಇದೇ ಆತ್ಮ ಜ್ಞಾನದ ಸ್ಥಿತಿ, ಇದೇ ವೇದಗಳ ಸಾರ, ಇದೇ ಭಗವದ್ಗೀತೆಯ ಸಾರ. ಈ ಮಹತ್ತರ ಸತ್ಯದ ಸಾರವನ್ನು ಸಾರಲು ಜ್ಞಾನೋದಯ ಪಡೆದಂತಹ ಬ್ರಹ್ಮರ್ಷಿ ಪಿತಾಮಹ ಪತ್ರಿಜೀಯವರ ಮಾರ್ಗದರ್ಶನದಲ್ಲಿ **1979**ನಲ್ಲಿ **PSSM** (ಪಿರಮಿಡ್ ಸ್ಪಿರಿಚ್ಯುವಲ್ ಸೊಸೈಟೀಸ್ ಮೂವ್‌ಮೆಂಟ್) ಜನ್ಮ ತಾಳಿತು. ಈ ಪರಮಗುರುಗಳು ಹಾಗೂ ಈ ಸಂಸ್ಥೆಯ ಸ್ವಯಂ ಸೇವಾ ಮಾಸ್ಟರುಗಳು ನೆಡಸಿಕೊಟ್ಟ ಧ್ಯಾನ, ಸ್ವಾಧ್ಯಾಯ, ಸತ್ಸಂಗ ಕಾರ್ಯಕ್ರಮಗಳ ಮೂಲಕ ಲಕ್ಷಾಂತರ ಜನರು ದುಃಖರಹಿತವಾದ ಆನಂದಮಯ ಜೀವನವನ್ನು ನಡೆಸುತ್ತಿದ್ದಾರೆ.


**PCSB ಜನನ ಮತ್ತು ವಾರ್ಷಿಕೋತ್ಸವ :**


ಮನುಕುಲದ ಹೊಸ ಪೀಳಿಗೆಯ ಪ್ರತಿಯೊಬ್ಬರೂ ಧ್ಯಾನಜೀವನ, ಸ್ವಾಧ್ಯಾಯ, ಸತ್ಸಂಗ, ಸಸ್ಯಾಹಾರ, ಪಿರಮಿಡ್ ಶಕ್ತಿ ಬಳಕೆಗಳನ್ನು ನಿತ್ಯ ಜೀವನದಲ್ಲಿ ಅಳವಡಿಸಿಕೊಂಡು ಆನಂದಮಯ ಮತ್ತು ಅಹಿಂಸಾಮಯ ಜೀವನ ನಡೆಸಲೇಬೇಕೆಂಬ ಸಂಕಲ್ಪದಿಂದ ಈ ಡಿಜಿಟಲ್ ತಂತ್ರಜ್ಞಾನಯುಗದಲ್ಲಿ ಜನ್ಮತಾಳಿದಂತಹ **PSSM**ನ ಸಹ ಸಂಸ್ಥೆಯೇ ಪಿರಮಿಡ್ ಕಾಲ್ ಸರ್ವೀಸಸ್ ಬೆಂಗಳೂರು, **(PCSB)** ಮೊದಲ ವರ್ಷದ ವಾರ್ಷಿಕೋತ್ಸವವನ್ನು ಅತ್ಯಂತ ಸಂಭ್ರಮದಿಂದ ದಿ.**04.06.2021** ರಂದು ಆಚರಿಸಿತು. ಈ **PCSB** ಸಂಸ್ಥೆಯ ಮೂಲಕ ಧ್ಯಾನ, ಸ್ವಾಧ್ಯಾಯ, ಸತ್ಸಂಗ, ಸಸ್ಯಾಹಾರ, ಪಿರಮಿಡ್ ಶಕ್ತಿ ಬಳಕೆಗಳ ಬಗ್ಗೆ ತರಗತಿ ಮತ್ತು ಕಾರ್ಯಾಗಾರದ ಮೂಲಕ ಪ್ರತಿ ಮನುಷ್ಯನ ಚಂಚಲಚಿತ್ತ, ಮೂಢಚಿತ್ತಗಳನ್ನು ಏಕಾಗ್ರ ಚಿತ್ತಗಳನ್ನಾಗಿ, ಶಾಂತ ಚಿತ್ತಗಳನ್ನಾಗಿ, ಆನಂದ ಚಿತ್ತಗಳನ್ನಾಗಿ ಪರಿವರ್ತಿಸಿ ಅವರವರ ವಿಚಾರಶುದ್ಧಿ, ಭಾವಶುದ್ಧಿ ಮತ್ತು ಶರೀರಶುದ್ಧಿ ಮಾಡಿಕೊಂಡು ಆನಂದಮಯವಾಗಿ ಜೀವಿಸಲು ಅವಶ್ಯಕವಾದ 'ಆನಂದವಿದ್ಯೆ'ಯನ್ನು ದೂರವಾಣಿ/ಮೊಬೈಲ್ ಫೋನ್/ ಅಥವಾ ಇನ್ನಿತರ ಎಲ್ಲಾ ಮಾಧ್ಯಮಗಳ **(Zoom, Youtube, etc,.)** ಮೂಲಕ ಬೋಧಿಸುವುದೇ ಈ ಸಂಸ್ಥೆಯ **(PCSB)** ಉದ್ದೇಶ. ಹೀಗಾದಾಗ ಈ ಭೂಮಂಡಲದ ಸಕಲ ಜೀವರಾಶಿಗಳು, ಸಕಲ ಪ್ರಕೃತಿಯು, ಸಕಲ ಸೃಷ್ಠಿಯು ಸ್ವರ್ಗವಾಗುತ್ತದೆ. ಈ ಹಾದಿಯಲ್ಲಿ ಸಹಕರಿಸುವಂತಹ ಚರ-ಅಚರ ಜೀವಾತ್ಮಗಳಿಗೆ ಶುಭ ಕೋರುತ್ತೇನೆ.


**ಇಂತಿ ಧನ್ಯವಾದಗಳು,**

**ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಡಾ|| ಗಿರಿಸ್ವಾಮಿ ಹಳ್ಳದ, MBBS,MS-Oph,FCAS**
**ನೇತ್ರ ಶಸ್ತ್ರ ಚಿಕಿತ್ಸ ತಜ್ಞರು, ಶಿವಮೊಗ್ಗ. 9972954615**

## ಪತ್ರೀಜಿಯವರೊಂದಿಗೆ PCSB ಮೊದಲನೆಯ ವಾರ್ಷಿಕೋತ್ಸವದ ಚಿತ್ರಗಳು





# ಪಿರಮಿಡ್ ಕಾಲ್ ಸರ್ವೀಸಸ್ ಬೆಂಗಳೂರು ಅರ್ಪಿಸುವ ನೇರ ಪ್ರಸಾರ ಕಾರ್ಯಕ್ರಮಗಳು

ಪಿರಮಿಡ್ ಸ್ಪಿರಿಚ್ಯುವಲ್ ಸೊಸೈಟೀಸ್ ಮೂವ್‌ಮೆಂಟ್ ಸಂಸ್ಥಾಪಕರಾದ ಬ್ರಹ್ಮರ್ಷಿ ಪಿತಾಮಹ ಪತ್ರೀಜಿಯವರ ನಿರ್ದೇಶನ ಮತ್ತು ಮಾರ್ಗದರ್ಶನದಲ್ಲಿ 'ಪಿರಮಿಡ್ ಕಾಲ್ ಸರ್ವೀಸಸ್ ಬೆಂಗಳೂರು' **(PCSB)** ಮೇ **26, 2020** ಲಾಕ್‌ಡೌನ್ ಸಮಯದಲ್ಲಿ ಪ್ರಾರಂಭವಾಯಿತು. ಧ್ಯಾನ ಪ್ರಚಾರವೇ ಇದರ ಮುಖ್ಯ ಉದ್ದೇಶವಾಗಿದೆ. ಜನರು ಮನೆಯಲ್ಲಿದ್ದುಕೊಂಡು, ಮೊಬೈಲ್ ಮೂಲಕ ಉಚಿತವಾಗಿ ಧ್ಯಾನ ಶಿಕ್ಷಣವನ್ನು ಪಡೆಯಬಹುದು. ಒಬ್ಬ ಸಾಮಾನ್ಯ ಮನುಷ್ಯನು ಧ್ಯಾನ ಕಲಿತು, ಆತ್ಮಜ್ಞಾನವನ್ನು ಪಡೆದು ತನ್ನ ಜೀವನವನ್ನು ಆನಂದವಾಗಿ ಪರಿವರ್ತಿಸುವ ಕಾರ್ಯದಲ್ಲಿ ಕಳೆದ ಒಂದು ವರ್ಷದಿಂದ **PCSB** ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದೆ. **2000** ಹೊಸ ಜನರಿಗೆ ಧ್ಯಾನವನ್ನು ಕಲಿಸಿದೆ. ಹಲವಾರು ಪಿರಮಿಡ್ ಮಾಸ್ಟರ್‌ಗಳು ಈ ಕಾರ್ಯದಲ್ಲಿ ಸ್ವಇಚ್ಛೆಯಿಂದ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. **PCSB** ಒಂದು ಲಾಭರಹಿತ ಸೇವಾ ಸಂಸ್ಥೆ **(Non Profit Service Organisation).**

ಪ್ರತಿದಿನ 'ಪಿರಮಿಡ್ ಕಾಲ್ ಸರ್ವೀಸಸ್ ಬೆಂಗಳೂರು' **Zoom** ಮತ್ತು **Youtube** ಮೂಲಕ ಹಲವಾರು ವೈವಿಧ್ಯಮಯ ಕಾರ್ಯಕ್ರಮಗಳು ನಡೆಯುತ್ತಿವೆ.

- ಪ್ರತಿದಿನ ಬೆಳಗ್ಗೆ **5.00 – 6.00** ಗಂಟೆಯ ವರೆಗೆ ಮಾರ್ಗದರ್ಶನ ಸಂಗೀತನಾದ ಧ್ಯಾನ
- ಪ್ರತಿದಿನ ಮಧ್ಯಾಹ್ನ **3.00 – 4.30** ಗಂಟೆಯ ವರೆಗೆ ಸತ್ಸಂಗ ಮತ್ತು ಧ್ಯಾನ ಕಾರ್ಯಕ್ರಮ
- ಪ್ರತಿದಿನ ಸಂಜೆ **5.00 – 6.00** ಗಂಟೆಯ ವರೆಗೆ ಮಕ್ಕಳಿಗೆ ಧ್ಯಾನ ಕಾರ್ಯಕ್ರಮ
- ಪ್ರತಿದಿನ ರಾತ್ರಿ **9.30 – 10.30** ಗಂಟೆಯ ವರೆಗೆ ಮಾರ್ಗದರ್ಶನ ಸಂಗೀತನಾದ ಧ್ಯಾನ
- ಪ್ರತಿ ಭಾನುವಾರ ಸಂಜೆ **6.00 – 6.30**ರ ವರೆಗೆ ಮಕ್ಕಳಿಗೆ ಭಗವದ್ಗೀತೆಯ ಕಾರ್ಯಕ್ರಮ

ಪ್ರತಿದಿನ ಸತ್ಸಂಗ ಕಾರ್ಯಕ್ರಮದಲ್ಲಿ ವಿಶೇಷ ವಿಷಯಗಳ ಹಂಚಿಕೆ ಇರುತ್ತದೆ. ಇದರಲ್ಲಿ ಪತ್ರೀಜಿರವರ ಪರಿಕಲ್ಪನೆಗಳು, ವಚನ ಜ್ಞಾನ, ಸಂಸಾರದಲ್ಲಿ ನಿರ್ವಾಣ, ಆಧ್ಯಾತ್ಮಿಕ ಶಾಸ್ತ್ರದ ಪರಿಕಲ್ಪನೆಗಳು, **PSSM** ಮಾಸ್ಟರ್ಸ್ ಅನುಭವಗಳು, ಪಿರಮಿಡ್ ಶಕ್ತಿ, ಸ್ವಾಧ್ಯಾಯ ಯೋಗ, ಆಧ್ಯಾತ್ಮಿಕ ಪಾಲನೆ, ಆಧ್ಯಾತ್ಮಿಕ ಕೃಷಿ, ಸಸ್ಯಾಹಾರದ ಪ್ರಾಮುಖ್ಯತೆ, ಶುದ್ಧ ಸಾತ್ವಿಕ ಅಡುಗೆಗಳು, ಸಂತಾನ ಪ್ರಾಪ್ತಿರಸ್ತು, ಸತ್ಯ ಪಯಣ, ಸೇತ್ ಕಾರ್ಯಾಗಾರ, ಭಗವದ್ಗೀತೆ, ಸ್ತ್ರೀ ಶಕ್ತಿಯ ಜಾಗರೂಕತೆ ಹೀಗೆ ಹಲವಾರು ವಿಷಯಗಳ ಕುರಿತು ಸತ್ಸಂಗ ಕಾರ್ಯಕ್ರಮಗಳು ನಡೆಯುತ್ತವೆ.

ಹೊಸದಾಗಿ ಧ್ಯಾನಕ್ಕೆ ಪ್ರವೇಶಿಸಿದ ಧ್ಯಾನಾಸಕ್ತರಿಗೆ **WhatsApp Group**ನಲ್ಲಿ ಎಲ್ಲಾ ರೀತಿಯ ಮಾರ್ಗದರ್ಶನ ಮತ್ತು ದಿನನಿತ್ಯದ ಕಾರ್ಯಕ್ರಮಗಳ ವಿವರಗಳನ್ನು ನೀಡಲಾಗುತ್ತದೆ.

## ಮುಂಬರುವ ಕಾರ್ಯಕ್ರಮಗಳು

- ಡಾ. ಗಿರಿಸ್ವಾಮಿ ಹಳ್ಳದ ಇವರಿಂದ - ಸಮಗ್ರ ಜೀವನ ಮತ್ತು ಸಂಪೂರ್ಣ ಆರೋಗ್ಯ - ಏಳು ದಿನಗಳ ಕಾರ್ಯಾಗಾರ
- ಶ್ರೀ ಅಯ್ಯಪ್ಪ ಪಿಂಡಿ ಇವರಿಂದ - ಆತ್ಮಜ್ಞಾನ - **21** ದಿನಗಳ ಧ್ಯಾನ ಕಾರ್ಯಕ್ರಮ
- ಕರ್ನಾಟಕದ ಪ್ರತಿ ಹಳ್ಳಿಗೂ ವಿಸ್ತರಣೆಗಾಗಿ ಕಾರ್ಯಕ್ರಮಗಳು
- ಸಮಗ್ರ ಶಿಕ್ಷಣಕ್ಕೆ ಸಂಬಂಧಪಟ್ಟಂತ ಕಾರ್ಯಕ್ರಮಗಳು
- ಶಾಂತಿ, ಸಮೃದ್ಧಿ, ಆರೋಗ್ಯ ಮತ್ತು ಆನಂದಕ್ಕಾಗಿ ಕಾರ್ಯಕ್ರಮಗಳು


## PCSB ಚಾನಲ್ ವಿಶ್ಲೇಷಣೆ

**SUBSCRIBERS**




**5,716**

**VIEWS**





**6,62,100**


**UPLOADS**



**1,436**



# ಪಿರಮಿಡ್ ಕಾಲ್ ಸರ್ವೀಸಸ್ ಬೆಂಗಳೂರು ಉದ್ದೇಶಗಳು

**1. <u>ಪಿರಮಿಡ್ ಕಾಲ್ ಸರ್ವೀಸಸ್ ಬೆಂಗಳೂರು(PCSB) ಎಂದರೆ ಏನು?</u>**
**ಉತ್ತರ :** ಜನರು ಮನೆಯಲ್ಲಿದ್ದುಕೊಂಡು, ಮೊಬೈಲ್ (ಆನ್‌ಲೈನ್) ಮೂಲಕ ಉಚಿತವಾಗಿ ಧ್ಯಾನ ಶಿಕ್ಷಣವನ್ನು ಪಡೆಯಲು ಬ್ರಹ್ಮರ್ಷಿ ಪಿತಾಮಹ ಪತ್ರೀಜಿಯವರ ಸೂಚನೆಗಳ ಮೇರೆಗೆ ಪ್ರಾರಂಭಿಸಿದ ಉಚಿತ ಧ್ಯಾನ ಬೋಧನೆಯ ಕಾರ್ಯಕ್ರಮ.

**2. <u>ಪಿರಮಿಡ್ ಕಾಲ್ ಸರ್ವೀಸಸ್ ಬೆಂಗಳೂರು ಇದನ್ನು ಏಕೆ ಆರಂಭಿಸಿದರು?</u>**
**ಉತ್ತರ :** ಪ್ರಸ್ತುತ ಪರಿಸ್ಥಿತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು, ಈ ಲಾಕ್‌ಡೌನ್ ಸಮಯವನ್ನು ಜನರೆಲ್ಲರೂ ಸದ್ವಿನಿಯೋಗ ಮಾಡಿಕೊಳ್ಳುತ್ತಾ, ಮಾನಸಿಕ ಪ್ರಶಾಂತತೆಯನ್ನು, ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಿಕೊಳ್ಳಬೇಕು ಎನ್ನುವ ಮುಖ್ಯ ಉದ್ದೇಶದೊಂದಿಗೆ ಮೊಬೈಲ್ ಮೂಲಕ ಉಚಿತ ಧ್ಯಾನ ಶಿಕ್ಷಣವನ್ನು ನೀಡಲು "ಪಿರಮಿಡ್ ಕಾಲ್ ಸರ್ವೀಸಸ್ ಬೆಂಗಳೂರು" ಇದನ್ನು ಆರಂಭಿಸಿದರು.

**3. <u>PCSB ಗಾಗಿ ಪತ್ರೀಜಿಯವರ ಯೋಜನೆ ಏನು?</u>**
**ಉತ್ತರ : PCSB** ಎನ್ನುವುದು ಪತ್ರೀಜಿಯವರ ಕನಸಿನ ಕೂಸು. ಇದರಿಂದ ಎಲ್ಲಾ ಭಾಷೆಗಳನ್ನು ಒಗ್ಗೂಡಿಸಿ ಸಾವಿರಾರು ಜನರ ಸಮೂಹದೊಂದಿಗೆ "ಧ್ಯಾನ ಜಗತ್", "ಪಿರಮಿಡ್ ಜಗತ್ ", "ಶಾಕಾಹಾರ ಜಗತ್" ಸ್ಥಾಪಿಸುವುದೇ ಪತ್ರೀಜಿಯವರ ದೂರದೃಷ್ಟಿ. ಧ್ಯಾನ ಕಲಿಯಲು ಆಸಕ್ತಿ ಇರುವವರಿಗೆ ಫೋನ್ ಮೂಲಕ ಅರಿವು ನೀಡುವುದು, ಲೈವ್ ಸೆಷನ್ಸ್ (ಆನ್‌ಲೈನ್) ಮೂಲಕ ಸೀನಿಯರ್ ಪಿರಮಿಡ್ ಮಾಸ್ಟರ್ಸ್‌ರಿಂದ ಜ್ಞಾನ ಶಿಕ್ಷಣ ನಿರ್ವಹಿಸುವುದು ಹಾಗೂ ಧ್ಯಾನ ಅನುಭವಗಳ ಮೇಲೆ ಸಂದೇಹಗಳು ಇರುವವರಿಗೆ ಫೋನ್ ಮೂಲಕ ಪರಿಹರಿಸಿ ಎಲ್ಲರಿಗೂ ಜ್ಞಾನ ನೀಡುವುದು **PCSB** ನ ಒಂದು ಭವಿಷ್ಯತ್ ಯೋಜನೆ.

**4. <u>PCSB ನಿಂದ ಸಮಾಜಕ್ಕೆ ಹೇಗೆ ಉಪಯೋಗವಾಗುತ್ತದೆ?</u>**
**ಉತ್ತರ : PCSB** ನಿಂದ ಎಲ್ಲರೂ ಜ್ಞಾನಿಗಳಾಗಿ ಸಮಾಜದಲ್ಲಿ ಜವಾಬ್ದಾರಿಯುತವಾಗಿ ಇರುತ್ತಾರೆ. ಅದರಿಂದ ಪ್ರಕೃತಿ ಮಾಲಿನ್ಯ, ಸಮಸ್ಯೆಗಳು ಹಾಗೂ ಸಮಾಜದಲ್ಲಿನ ಅರಾಜಕತೆಗಳು ಕಡಿಮೆಯಾಗಿ ಜೀವ ಹಿಂಸೆಯು ಇಳಿಮುಖವಾಗುತ್ತದೆ. ಪ್ರಜೆಗಳು ತಮ್ಮ ಮನೆಯಿಂದಲೇ ಉಚಿತವಾಗಿ ಧ್ಯಾನ ಕಲಿತುಕೊಂಡು, ಅದರಿಂದ ತಮ್ಮ ಕರ್ಮಗಳನ್ನು ಹೊಡೆದೋಡಿಸಿ ಅವರ ಆಧ್ಯಾತ್ಮಿಕ ಪ್ರಗತಿಯನ್ನು ಸಾಧಿಸಿಕೊಳ್ಳಲು ಉಪಯೋಗವಾಗುತ್ತದೆ.

**5. <u>ಪಿರಮಿಡ್ ಮಾಸ್ಟರ್ಸ್‌ಗೆ PCSB ನಿಂದ ಪ್ರಯೋಜನವೇನು?</u>**
**ಉತ್ತರ : PCSB** ನಿಂದ ಪಿರಮಿಡ್ ಮಾಸ್ಟರ್ಸ್ ಹೊರಗಡೆ ಎಲ್ಲಿಯೂ ಹೋಗದಂತೆ ಮನೆಯಲ್ಲಿಯೇ ಇದ್ದು ಹೊಸದಾಗಿ ಧ್ಯಾನಕ್ಕೆ ಬರುವವರಿಗೆ ಆನ್ಲೈನ್ ಮೂಲಕ ಕಡಿಮೆ ಸಮಯದಲ್ಲಿ ಹೆಚ್ಚು ಜನರಿಗೆ ಧ್ಯಾನ ಶಿಕ್ಷಣ ನೀಡಬಹುದು. ಇದರಿಂದ ಅವರ ಸಮಯ ಉಳಿತಾಯವಾಗಿ ಧ್ಯಾನ ಸಾಧನೆ, ಸ್ವಾಧ್ಯಾಯಕ್ಕೆ ಹೆಚ್ಚು ಸಮಯ ದೊರೆತು ಇನ್ನಷ್ಟು ಅನುಕೂಲವಾಗುತ್ತದೆ.


**6. <u>ನಮ್ಮ ಟ್ರಸ್ಟ್‌ಗೆ PCSB ನಿಂದ ಉಪಯೋಗವೇನು?</u>**
**ಉತ್ತರ : PCSB** ಮೂಲಕ ಜನರು ಧ್ಯಾನದ ಮಹತ್ವ ತಿಳಿದುಕೊಳ್ಳುವುದರೊಂದಿಗೆ ಟ್ರಸ್ಟ್ ನಿರ್ವಹಿಸುವ ಕಾರ್ಯಕ್ರಮಗಳಿಗೆ ತನು-ಮನ-ಧನ ಸೇವಾರೂಪದಲ್ಲಿ ಮತ್ತಷ್ಟು ಅಧಿಕವಾದ ಸಹಾಯ ಸಹಕಾರಗಳು ಲಭಿಸುತ್ತವೆ.

**7. <u>ಪಿರಮಿಡ್‌ಗಳನ್ನು ಕಟ್ಟಲು PCSB ಹೇಗೆ ಸಹಾಯಕವಾಗುತ್ತದೆ?</u>**
**ಉತ್ತರ :** ಪಿರಮಿಡ್ ಕೆಳಗೆ ಕುಳಿತುಕೊಂಡು ಧ್ಯಾನ ಮಾಡಿದರೆ ಹೊಂದುವಂತಹ ಶಕ್ತಿಯನ್ನು **PCSB** ಮೂಲಕ ಧ್ಯಾನಿಗಳಿಗೆ ತಿಳಿಸುತ್ತಾ, ಪಿರಮಿಡ್ ನಿರ್ಮಾಣದ ಪ್ರಯೋಜನಗಳು ಹಾಗೂ ನಮ್ಮ **PSSM**ನಲ್ಲಿ ಪಿರಮಿಡ್ಸ್ ಎಲ್ಲೆಲ್ಲಿ ಇದೆಯೋ ಅವುಗಳ ಒಂದು ಪ್ರತ್ಯೇಕತೆಯನ್ನು ಅವರಿಗೆ ಹೇಳುವುದರಿಂದ ನೂತನ ಪಿರಮಿಡ್‌ಗಳನ್ನು ನಿರ್ಮಿಸುವುದರೊಂದಿಗೆ ಪತ್ರೀಜಿಯವರ ಗುರಿಯಾದ ಪಿರಮಿಡ್ ಜಗತ್ತಿಗೆ **PCSB** ಕೂಡಾ ತನ್ನ ಸೇವೆ ಸಲ್ಲಿಸುತ್ತದೆ.

**8. <u>ಧ್ಯಾನಮಹಾಚಕ್ರಗಳಿಗೆ PCSB ಹೇಗೆ ಸಹಾಯಕವಾಗುತ್ತದೆ?</u>**
**ಉತ್ತರ : PCSB** ಮೂಲಕ ಧ್ಯಾನ ಮಹಾಚಕ್ರಗಳಿಗೆ ಭೌತಿಕವಾಗಿ ಅಧಿಕ ಜನರು ಹಾಜರಾಗುವ ಅವಕಾಶವಿರುತ್ತದೆ. ಧ್ಯಾನ ಮಹಾಚಕ್ರದ ಕಾರ್ಯಕ್ರಮದ ವಿವರಗಳು **PCSB** ಆನ್ಲೈನ್ ಮೂಲಕ ಸಿಗುವುದರಿಂದ ಹೆಚ್ಚು ಜನ ಇದರ ಉಪಯೋಗ ಪಡೆದುಕೊಳ್ಳುತ್ತಾರೆ.


**9. <u>ಪ್ರಪಂಚದಾದ್ಯಂತ PCSB ಹೇಗೆ ಎಲ್ಲರಿಗೂ ಉಪಯೋಗವಾಗುತ್ತದೆ?</u>**
**ಉತ್ತರ :** ಧ್ಯಾನದಲ್ಲಿ ಬರುವ ಅನುಭವಗಳು, ಸಂದೇಹಗಳು **PCSB** ಮೂಲಕ ಹಿರಿಯ ಧ್ಯಾನಿಗಳ ಜೊತೆ ಹಂಚಿಕೊಳ್ಳಲು ಅವಕಾಶ ಇರುವುದರಿಂದ ಅವರ ಧ್ಯಾನ ಸಾಧನೆ ಹೆಚ್ಚಿಸಿಕೊಳ್ಳಬಹುದು. **PCSB** ಎನ್ನುವುದು ಒಬ್ಬ ಮನುಷ್ಯನಿಗೆ, ಒಂದು ರಾಜ್ಯಕ್ಕೆ ಸೀಮಿತವಾಗಿರದೇ ಪ್ರಪಂಚದಾದ್ಯಂತ ಆಸಕ್ತಿ ಇರುವ ಪ್ರತಿಯೊಬ್ಬರೂ ತಾವಿರುವ ಸ್ಥಳದಿಂದಲೇ ಅವರ ಆತ್ಮೋನ್ನತಿಗೆ ಬೇಕಾದ ಜ್ಞಾನವನ್ನು ಸಂಪಾದಿಸಿಕೊಳ್ಳುವುದಕ್ಕೆ ಸಹಾಯ ಮಾಡುತ್ತದೆ.


**10. <u>ಭವಿಷ್ಯತ್ತಿನಲ್ಲಿ PCSB ಜನರಿಗೆ ಹೇಗೆ ಉಪಯೋಗ ವಾಗುತ್ತದೆ?</u>**
**ಉತ್ತರ : PSSM** ನಲ್ಲಿ ಇರುವ ಎಲ್ಲಾ ಪ್ರಾಜೆಕ್ಟ್‌ಗಳ ಸಮಾಚಾರವನ್ನು ಮೊಬೈಲ್ ಮೂಲಕ ನೀಡಲು **PCSB** ಸಿದ್ಧವಾಗಿರುತ್ತದೆ ಇದರಿಂದ ಪ್ರಾಜೆಕ್ಟ್(ಕಾರ್ಯಕ್ರಮ) ಅಭಿವೃದ್ಧಿಗೆ ದೇಣಿಗೆ ಸಂಗ್ರಹಣೆ ಮತ್ತಷ್ಟು ಸುಲಭವಾಗುತ್ತದೆ. **PCSB** ಮೂಲಕ ಸಮಾಜದಲ್ಲಿನ ಜನರಿಗೆ ಧ್ಯಾನವು ಲಭಿಸಿದರೆ ಹೊಸ ಆಧ್ಯಾತ್ಮಿಕ 'ಧ್ಯಾನ ಸುವರ್ಣ ಸಮಾಜ'ದ ನಿರ್ಮಾಣವಾಗಿ ಸತ್ಯಯುಗ ಪ್ರಾರಂಭವಾಗುತ್ತದೆ. **PCSB** ಎನ್ನುವುದು ಪ್ರಸ್ತುತ ಕಾಲದಲ್ಲಿ ಆರಂಭವಾದ ಒಂದು ಡಿಜಿಟಲ್ ಮಾಧ್ಯಮ. ಇದರಿಂದ ಜನರನ್ನು ಶಾಕಾಹಾರಿಗಳಾಗಿ, ಯೋಗಿಗಳಾಗಿ ಮತ್ತು ವಸುದೈವ ಧ್ಯಾನ ಕುಟುಂಬಿಕರಾಗಲೂ **PCSB** ಶ್ರಮಿಸುತ್ತಿದೆ.










# ಅನಿಸಿಕೆಗಳು



ಪಿರಮಿಡ್ ಕಾಲ್ ಸರ್ವೀಸಸ್ ಬೆಂಗಳೂರಿನ ಎಲ್ಲಾ ಪ್ರೀತಿಯ ಮಾಸ್ಟರ್ಸ್‌ಗೆ ಶುಭಾಶಯಗಳು. **PCSB** ಪಿರಮಿಡ್ ಸ್ಪಿರಿಚ್ಯುವಲ್ ಸೊಸೈಟೀಸ್ ಮೂವ್‌ಮೆಂಟ್‌ನ ಒಂದು ಭಾಗವಾಗಿ ಪಿತಾಮಹ ಪತ್ರೀಜಿಯವರ ಬೃಹತ್ ಯೋಜನೆಗೆ ಅನುಗುಣವಾಗಿ ಸೇವೆಯನ್ನು ಸಲ್ಲಿಸುತ್ತಿದೆ. ನಿಯಮಿತ ಬೆಳಿಗ್ಗೆ ಮತ್ತು ಸಂಜೆ ಮಾರ್ಗದರ್ಶನ ಧ್ಯಾನದೊಂದಿಗೆ ಸ್ವಾಧ್ಯಾಯ ಯೋಗವನ್ನು ನಡೆಸುವುದು, ಮಾಸ್ಟರ್ಸ್ ಅನುಭವಗಳ ಹಂಚಿಕೆ ಮತ್ತು ಮಕ್ಕಳೊಂದಿಗೆ ವಿಶೇಷ ಧ್ಯಾನ ಮಾಡಿಸುತ್ತಿದೆ. ಮುಖ್ಯವಾಗಿ **PCSB** ಸೇವೆ ಫೋನ್ ಕರೆಯ ಮೂಲಕ ಧ್ಯಾನವನ್ನು ತಿಳಿಸುವುದು. ಪತ್ರೀಜಿಯವರಿಗೆ ನನ್ನ ಪ್ರಣಾಮಗಳು.

**- T.ಹರಿಶಂಕರ್, ಹೊಸಪೇಟೆ**
**ಅಧ್ಯಕ್ಷರು, KDPP**



**PCSB** ಗೆ ವಾರ್ಷಿಕೋತ್ಸವದ ಅಭಿನಂದನೆಗಳು. **PCSB** ಇದು ಬ್ರಹ್ಮರ್ಷಿ ಪಿತಾಮಹ ಪತ್ರೀಜಿಯವರ ಮಹಾನ್ ಕಲ್ಪನೆಯಲ್ಲಿ ಮೂಡಿಬಂದ ದಿವ್ಯ ರೂಪವಾಗಿದೆ. ಸಂಪೂರ್ಣ ಉಚಿತವಾಗಿ, ಮಾನವಕೋಟಿಯ ಸರ್ವ ಸಮಸ್ಯೆಗಳಿಗೂ ಧ್ಯಾನ ರೂಪದ ದಿವ್ಯೌಷಧಿಯ ಮೂಲಕ ಪರಿಹಾರ ನೀಡುವುದಕ್ಕಾಗಿ, ಸದಾ ಸನ್ನದ್ಧವಾಗಿರುವ, ಸಮರ್ಪಿತ ಮನೋಭಾವದ, ಸೇವಾ ದುರಂಧರರ ಟೀಮ್ ತಯಾರಿಸಿ ನಿಲ್ಲಿಸಿರುವುದು, ಅವರ ಭವಿಷ್ಯದ ಯೋಜನೆಗಳ ಮುನ್ನುಡಿಯಾಗಿದೆ. ಬ್ರಹ್ಮರ್ಷಿ ಪಿತಾಮಹ ಪತ್ರೀಜಿಯವರ **GRAND VISION** ಗೆ **GRAND** ಪ್ರಣಾಮಗಳು.

**-ಡಾ|| ಜೀವಂಧರ ಕೇತಪ್ಪನವರ, ಚಿಕ್ಕೋಡಿ**



**PCSB**ಯಲ್ಲಿ **helpline** ನಂಬರ್ ಆಗಿ ನಮ್ಮ ವಯಕ್ತಿಕ ಮೊಬೈಲ್ ನಂಬರ್ ಕೊಡಲಾಗಿತ್ತು. ಇದರಿಂದ ಅನೇಕ ಜನರು ನಮಗೆ ಕರೆ ಮಾಡುತ್ತಿದ್ದರು. ನಾವು ಅವರಿಗೆ ಧ್ಯಾನ ಮಾಡುವ ವಿಧಾನ ತಿಳಿಸುತ್ತಿದ್ದೇವೆ. ಹಾಗೂ ನಂತರ ಅವರ ಎಷ್ಟೋ ಪ್ರಶ್ನೆಗಳಿಗೆ ಉತ್ತರ ಕೊಡುತ್ತಿದ್ದೇವೆ. ಧ್ಯಾನಾಭ್ಯಾಸದ ರೀತಿ, ಧ್ಯಾನದ ಲಾಭಗಳು ಮುಂತಾದವುಗಳನ್ನು ತಿಳಿಸುವುದರೊಂದಿಗೆ ಅವರನ್ನು PCSB ವಾಟ್ಸಾಪ್‌ಗ್ರೂಪ್‌ಗೆ ಸೇರ್ಪಡೆ ಮಾಡಿಕೊಳ್ಳುತ್ತೇವೆ. ಇಂತಹ ಶ್ರೇಷ್ಠ ಕಾರ್ಯವನ್ನು ಉಚಿತವಾಗಿ ನೀಡುತ್ತಿರುವಂತಹ ಗುರುಗಳಾದ ಬ್ರಹ್ಮರ್ಷಿ ಪತ್ರೀಜಿಯವರಿಗೂ ಅನಂತ ಕೋಟಿ ನಮನಗಳನ್ನು ಸಲ್ಲಿಸುವುದು ನಮ್ಮ ಜೀವನ ಸಾರ್ಥಕವಾಯಿತು ಎನಿಸುವಂತೆ ಮಾಡಿದೆ.

**- ನಾಗರತ್ನ ವಿರೂಪಾಕ್ಷ, ಗೌರಿಬಿದನೂರು**

# ಅನುಭವಗಳು



ನನ್ನ ಸ್ನೇಹಿತನ ಮೂಲಕ **PCSB** ವಾಟ್ಸಾಪ್ ಗುಂಪಿಗೆ ಸೇರಿಕೊಂಡು “ಆನಾಪಾನಾಸತಿ” ಧ್ಯಾನವನ್ನು ಕಲಿತುಕೊಂಡೆ. ನಾನು ಒಂದು ವರ್ಷದಿಂದ ಧ್ಯಾನ ಮಾಡುತ್ತಿದ್ದೇನೆ. ನನ್ನಲ್ಲಿ ಧ್ಯಾನ, ಸ್ವಾಧ್ಯಾಯ, ಸಜ್ಜನಸಾಂಗತ್ಯ ಈ ಮೂರು ನಿಯಮಗಳನ್ನು ಅಳವಡಿಸಿಕೊಂಡು ಪ್ರತಿನಿತ್ಯ ಚಟುವಟಿಕೆಗಳಲ್ಲಿ ಆನಂದದಿಂದ ಜೀವನವನ್ನು ನಡೆಸುತ್ತಿದ್ದೇನೆ. ನನ್ನಲ್ಲಿರುವ ದುಃಖ, ಅಸೂಯೆ, ಅಜ್ಞಾನ, ಶತ್ರುತ್ವ, ಮೂಢನಂಬಿಕೆ, ಹೆದರಿಕೆ, ನಕಾರಾತ್ಮಕ ಆಲೋಚನೆಗಳನ್ನು ದೂರಮಾಡಿ ನನ್ನನ್ನು ಅರಿತುಕೊಂಡು ಆತ್ಮಜ್ಞಾನದಿಂದ ಸತ್ಯವನ್ನು ತಿಳಿದುಕೊಂಡೆ.

**- ಶ್ವೇತ.ಕೆ.ಬಿ, ದಾವಣಗೆರೆ**



ನನಗೆ **PCSB** ಯಿಂದ ಕಳೆದ ವರ್ಷ ಧ್ಯಾನ ಪರಿಚಯವಾಯಿತು. ನನಗೆ ಚರ್ಮ ಸಮಸ್ಯೆ, ಗರ್ಭಾಶಯಕ್ಕೆ ಸಂಬಂಧಿಸಿದ ಸಮಸ್ಯೆ, ತಲೆನೋವು, ಚರ್ಮ ಸಮಸ್ಯೆ, ಅಜೀರ್ಣ ಸಮಸ್ಯೆ ಇತ್ತು. ನಾನು ದಿನವೂ ಮಾತ್ರೆ ತೆಗೆದುಕೊಳ್ಳುತ್ತಿದ್ದೆ. ನನಗೆ ಧ್ಯಾನ ಪರಿಚಯ ಆದಾಗಿನಿಂದ ಮಾತ್ರೆಗಳನ್ನು ಬಿಟ್ಟಿದ್ದೇನೆ. ಧ್ಯಾನ ಸಾಧನೆ ಹೆಚ್ಚು ಹೆಚ್ಚು ಮಾಡುತ್ತಾ ಅನಾರೋಗ್ಯ, ನಕಾರಾತ್ಮಕ ಆಲೋಚನೆಗಳನ್ನು ಕಳೆದುಕೊಂಡೆ. ನಾನು ಪ್ರತಿದಿನ ರಾತ್ರಿ ಮಲಗುವಾಗ ಪಿರಮಿಡ್ ಕೆಳಗಡೆ ನೀರನ್ನು ಇಟ್ಟು ಬೆಳಗ್ಗೆ ಅದನ್ನು ಕುಡಿಯುತ್ತಿದ್ದೇನೆ ಅದರಿಂದ, ಅಜೀರ್ಣ ಸಮಸ್ಯೆ ಕಡಿಮೆ ಆಗಿದೆ. ಈಗ ನಾನು ಚಿಕ್ಕ ಪುಟ್ಟ ಸಮಸ್ಯೆಗಳಿಗೆ ಧ್ಯಾನದ ಮೂಲಕ ಪರಿಹಾರ ಪಡೆಯುತ್ತೇನೆ.

**-M. ಲಾವಣ್ಯ, ಕೊಪ್ಪ**

**YouTube Link:**
www.youtube.com/PyramidCallServicesBengaluru/live

**Join ZOOM Meeting:**
**Meeting ID**: 982 166 3558 | **Password**: 297628